ಶ್ರೀ ಎಂ. ಎಂ. ಸಜ್ಜನ್.–ಸ್ವಾಮಿ, ನಾನು ಆಗಲೇ ಹೇಳಿದೆ. 82 ಹೆಲ್ತ್ ವಿಜಿಟರ್ಸ್, 85 ಮಿಡ್ ವೈವ್ಸ್ ಮತ್ತು 1472 ನರ್ಸ್‌ಗಳ ನೇಮಕಾತಿ ಇನ್ನೂ ಆಗಬೇಕಾಗಿದೆ. ನೇಮಕಾತಿ ಮಾಡಿಕೊಳ್ಳುವುದಕ್ಕೆ ಏತಕ್ಕೆ ತಡವಾಗಿದೆ? ಕೆಲವು ಹಳ್ಳಿಗಾಡುಗಳಲ್ಲಿರತಕ್ಕ ದವಾಖಾನೆಗಳಲ್ಲಿ ಕಾಂಪೌಂಡರುಗಳು ಇರುವುದಿಲ್ಲ. ಕಾಂಪೌಂಡರುಗಳು ಎಷ್ಟು ಬೇಕೋ ಅಷ್ಟು ಸಂಖ್ಯೆ ತಮ್ಮ ಇರಾಖೆಯಲ್ಲಿ ಸ್ಯಾಂಕ್ಷನ್ ಆಗಿದೆ ಎಂದು ಹೇಳುತ್ತೀರಿ. ಆದರೆ, ಏತಕ್ಕೆ ಅವರನ್ನು ನೇಮಕ ಮಾಡಿಲ್ಲ ಎನ್ನುವ ಬಗ್ಗೆ ನನಗೆ ಸಂಶಯ ಇದೆ. ನಮ್ಮ ಮುದ್ದೇಬಿಹಾಳ ತಾಲ್ಲೂಕಿನ ತಂಗಡಿ ಮುಂತಾದ ಕಡೆಗಳಲ್ಲಿ ಕಂಪೌಂಡರುಗಳು ಇಲ್ಲ. ಆದುದರಿಂದ ಅವರನ್ನು ಅಪಾಯಿಂಟ್ ಯಾವಾಗ ಮಾಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪ.— ಸರಕಾರದ ಕಡೆಯಿಂದ ತಡವಾಗಿಲ್ಲ. ನಾವು ಏನು ಒಂದು ನಮಿತಿಯನ್ನು ಮಾಡಿದ್ದೇವೆ, ಅವರು ಹೇಳುತ್ತಾರೆ, ಕಮಿಟಿ ಮಾಡುವುದಲ್ಲ ಎಂದು. ಏನಾದರೂ I will issue instructions today only that all the sanctioned posts must be filled up within a month.

## Underground Water Survey in the State

382 **Sri K. H. HANUME GOWDA** (Hassan).—

Will the Minister for Industries and Parliamentary Affairs be pleased to state:—

(*a*) the number of Geo-physical Units of underground water survey in the State;

(*b*) the amount that is being spent each year in the State under this Head;

(*c*) the area selected in Hassan District by the Geo-physical Survey Unit for digging the Borewells after conducting the underground water survey (the addresses of such farmers may be furnished);

(*d*) the number of Borewells dug in Hassan District by the Geological Department in accordance with the suggestions of these units;

(*e*) out of them, the number of successful Borewells;

(*f*) the number of unsuccessful Borewells;

(*g*) the reasons for failure of Borewells at places selected by the Geo-physical Units after scientific survey;

(*h*) the action Government propose to take against such Geo-physical Units ?

**Sri S. M. KRISHNA** (Minister for Industries and Parliamentary Affairs).—

(*a*) Eight Units.

(*b*) About Rs. 88,500 per year is being spent.

(*c*) The places have been selected for digging the Borewells at Channarayapatna, Hassan, Sakaleshpur, Alur, Arasikere Taluk of

Hassan District during 1974-75. The List of addresses of ryots is placed on the Table of the House;*

(*d*) 14 Borewells have been provided.

(*e*) 10 Borewells are successful.

(*f*) 4 are unsuccessful.

(*g*) The main reasons for the failure are: probability of less underground water in the rock below the well though it appears as such.

The cracks below the rocks may be without water.

The catchment area supplying water to the places survey may be limited.

(*h*) It is not possible to vouchsafe 100 percent water by geo-physical survey. Therefore it is not proper to take action again t the persons who have conducted unsuccessful survey.

ಶ್ರೀ ಕೆ. ಎಚ್. ಹನುಮೇಗೌಡ,—ಜಿಯೋ ಫಿಸಿಕಲ್ ಯೂನಿಟ್ಟಿನವರಿಂದ ಹಾಕಿಸಿದ ಬೋರ್ ವೆಲ್‌ಗಳು ಫಲಕಾರಿಯಾಗಿಲ್ಲದಿರುವುದರ ಬಗ್ಗೆ ಕಾರಣ ಕೊಡುತ್ತಾ, ಬಾವಿಯು ಕೆಳಗೆ ಶಿಥಿಲ ಶಿಲೆಯು ಮಂದ ಹೆಚ್ಚು ಕಂಡರೂ ಅದರಲ್ಲಿ ಅಂತರ್ಜಲ ಹೆಚ್ಚು ಇಲ್ಲದೇ ಇರಬಹುದು; ಶಿಲೆಯು ಕೆಳಭಾಗದಲ್ಲಿ ನೀಳುಗಳು ನೀರಿನಿಂದ ತುಂಬಿಲ್ಲದೇ ಹೋಗಬಹುದು, ಸಮೀಕ್ಷೆತ ಸ್ಥಳಗಳಿಗೆ ನೀರು ಪೂರೈಕೆ ಮಾಡುವ ಜಲಾನಯನ ಪ್ರದೇಶ ಸೀಮಿತವಾಗಿರಬಹುದು ಎಂದು ಹೇಳಿದ್ದೀರಿ. ತಮ್ಮ ಇಲಾಖೆಯ ಯೂನಿಟ್ಟಿನಿಂದ ನೀರು ಬರುತ್ತದೆಯೇ ಎಂದು ತಿಳಿದುಕೊಳ್ಳುವುದಕ್ಕೆ ಎಂಬುದನ್ನು ಖಾತರಿಪಡಿಸಿ ಕೊಳ್ಳುವುದಕ್ಕೆ ಕೇಳಿದ್ದಾರೆಯೇ ಹೊರತು, ತಾವು ಕೊಟ್ಟ ಕಾರಣಗಳೂ ರೈತರಿಗೆ ಚೆನ್ನಾಗಿ ಗೊತ್ತು. ಆದುದರಿಂದ, ತಾವು ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ. ಇದನ್ನು ತಪ್ಪಿಸಿ, ನೀರು ಸಿಕ್ಕುವ ಸ್ಥಳ ಕಂಡುಹಿಡಿಯುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.— ಇದಕ್ಕಿಂತಲೂ ಶಾಸ್ತ್ರೀಯವಾದ ವಿಧಾನ ನನಗೆ ಗೊತ್ತಿಲ್ಲ.

ಶ್ರೀ ಕೆ. ಎಚ್, ಹನುಮೇಗೌಡ.—ಜಿಯಲಾಜಿಸ್ಟ್‌ಗಳು ಹೋಗಿ ಭೂಮಿಯ ಮೇಲೆ ತಿರುಗಾಡಿ ಉತ್ತಮ ಸ್ಥಳವನ್ನು ಬಾವಿಗಾಗಿ ಆಯ್ಕೆ ಮಾಡಿದರೆ, ಸುಮಾರು 100 ರಲ್ಲಿ 5-6 ಫೆಲ್ಯೂರ್ ಆಗುವುದು ಅಪರೂಪ. ಅವೈಜ್ಞಾನಿಕವಾದಿಂದ ಕೆಲಸ ಬಾರದೇ ಇರುವವರೆಲ್ಲಾ ಬಂದು ಮಾಡಿದರೆ 14ಕ್ಕೆ ಸುಮಾರು ನಾಲ್ಕು ಫೆಲ್ಯೂರ್ ಆಗುತ್ತವೆ. ಈಗ ಸುಮಾರು 30 ಪರ್ಸೆಂಟ್ ಫೆಲ್ಯೂರ್ ಆಗಿವೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ? ನ್ಯಾಯವಾಗಿ ಟ್ರೈನಿಂಗ್ ಆಗದೇ ಇರುವವರು ಅಲ್ಲಿಗೆ ಹೋಗಿ ರೈತರನ್ನು ಕೊಲೆ ಮಾಡುತ್ತಿದ್ದಾರೆ ಎಂದು ಸರಕಾರದ ಮೇಲೆ ನಾನು ಆರೋಪ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಸಾಧಾರಣವಾಗಿ ಸುಮಾರು 20-25 ಪರ್ಸೆಂಟ್ ಫೆಲ್ಯೂರ್ ಆಗಬಹುದು. ಶಾಸ್ತ್ರೀಯವಾಗಿ ಮಾಡಿ ಅಥವಾ ಹಳ್ಳಿಗಳಲ್ಲಿರುವ ವಾಟರ್ ಡಿವೈನರ್ಸ್ ಅವರು ಮಾಡಿದರೂ there is bound to be certain percentage of failure. It would not be reasonable to say. ಇವರು ಹೋಗಿ ಹಾಕಿದ ಬಾವಿಯಲ್ಲೇ ನೀರು ಬರಲಿಲ್ಲ, ಅದಕ್ಕೋಸ್ಕರ ಅವರ ತಲೆ ಕಡಿದು ಹಾಕಿ ಎಂದು ಹೇಳುವುದು ಸಮಂಜಸವಲ್ಲ. ಮತ್ತು ಕೆಲಸ ಬಾರದೆ ಇರುವವರು ಬಂದು ಹಳ್ಳಿಗಾಡಿನ ಜನರ ಕೊಲೆ ಮಾಡುತ್ತಿದ್ದಾರೆ ಎಂದು ಹೇಳಿದರು. ಈಗ ಜಿಯೋ ಫಿಸಿಕಲ್ ಯೂನಿಟ್ ಎಂದು ನಾವು ಮಾಡಿದ್ದೇವೆ. ಅಲ್ಲಿ ಕ್ವಾಲಿಫೈಡ್ ಜನರನ್ನೇ ಕೆಲಸಕ್ಕೆ ನೇಮಿಸಿಕೊಳ್ಳಬೇಕಾಗುತ್ತೆ, ಆದುದರಿಂದ, ಮಾನ್ಯ ಸದಸ್ಯರು ಏನಾದರೂ ಕ್ವಾಲಿಫೈಡ್ ಅಲ್ಲದ ಜನರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದು ಆರೋಪ ಮಾಡುವುದಾದರೆ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

---

*Copy placed in the Karnataka Legisleture Library *vide* No. 34 dated 17th March 1975.

ಶ್ರೀ ಸಿ. ಬೈರೇಗೌಡ.— ತಾವು ಏನು ಜಿಯೋ ಫಿಸಿಕಲ್ ಯೂನಿಟ್ ಎಂದು ಮಾಡಿದ್ದೀರಿ, ಅವರಿಗೆ ಕೊಟ್ಟಿರುವ ಸಲಕರಣೆಗಳು ಬಹಳ ಪುರಾತನ ಕಾಲದವು. ಈಗ ಹೊಸ ಹೊಸ ಸಲಕರಣೆಗಳನ್ನು ತರಿಸಿ, ಅವುಗಳಿಂದ ಹೆಚ್ಚು ಪ್ರಯೋಜನ ಪಡೆಯುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ? ವಿಜ್ಞಾನ ಬಹಳ ಮುಂದೆ ಹೋಗುತ್ತಾ ಹೋಗುತ್ತಾ ಹೊಸ ಹೊಸದಾದ ಸಾಧನಗಳು ಬರುತ್ತಾ ಇವೆ. ಆದುದರಿಂದ, ಅತಿ ಆಧುನಿಕ ಸಾಧನಗಳನ್ನು ತರಿಸಿ, ಈ ಒಂದು ಕೆಲಸವನ್ನು ಪರಿಣಾಮಕಾರಿಯಾಗುವಂತೆ ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಸದಸ್ಯರ ಸಲಹೆಯಲ್ಲಿ ಅರ್ಥ ಇದೆ. ಈಗ ಇರತಕ್ಕ ಎರಡು ಯೂನಿಟ್ಟುಗಳು they have almost become absolete. We have got to replace this with new most-modern ones. We will take steps depending upon the financial outlay that the Government is going to sanction.

ಶ್ರೀ ಜೆ. ವೆಂಕಟಪ್ಪ.— ಕೆಲವು ರೈತರು ಬೋರ್‌ವೆಲ್‌ಗಳನ್ನು ಹಾಕಿಸಿ, ಅವುಗಳು ಫೆಲ್ಯೂರ್ ಆಗಿವೆ. ಅಂತಹವರು ಜಿಯೆಲಾಜಿಕರ್ ಇರಾಜೆಗೆ ತಿಳಿಸಿದ ಮೇಲೆ ಅವರಿಗೆ ನಬ್ಬಿಡಿ ಮುರಿದು ಕೊಡುತ್ತೀರಿ. ಆದರೆ, ಸೆಕ್ರೆಟರಿಯೇಟ್‌ನಲ್ಲಿ ನದರಿ ಫೈಲು ಬೇಗನೇ ಡಿಸ್ಪೋಸ್ ಆಗುವುದಿಲ್ಲ ಏತಕ್ಕೆ?

ಶ್ರೀ ಎಸ್. ಎಂ. ಕೃಷ್ಣ.— ಹಾಗೆ ಏನಾದರೂ ಫೈಲ್‌ಗಳು ಜಾಗ್ರತೆ ಡಿಸ್ಪೋಸ್ ಆಗದೇ ಹೋದರೆ, ಡಿಸ್ಪೋಸ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಕೆಲಸ ಮಾಡದವರ ಮೇಲೆ ತಾವು ಏನೂ ಕ್ರಮ ತೆಗೆದು ಕೊಳ್ಳುವುದಿಲ್ಲ, ಬಹಳ ಉದಾರತೆಯನ್ನು ವ್ಯಕ್ತಮಾಡಿದಿರಿ. ಇವರನ್ನು ನಂಬಿ, ಮನೆ ಜಮೀನೆಲ್ಲ ವನ್ನೂ ಆಧಾರ ಮಾಡಿ ನಿರ್ಮಾಮವಾಗುವ ರೈತರ ಬಗ್ಗೆ ತಾವು ಏನು ಪರಿಹಾರ ಕೊಡುತ್ತೀರಿ?

ಶ್ರೀ ಎಸ್. ಎಂ. ಕೃಷ್ಣ.— ಇವರ ಬಗ್ಗೆಯೂ ಔದಾರ್ಯ, ಕನಿಕರ, ಅನುಕಂಪ ಎಲ್ಲಾ ಇದೆ.

ಶ್ರೀ ಕೆ. ಎಚ್. ಹನುಮೇಗೌಡ.— 5-10 ಸಾವಿರ ರೂಪಾಯಿ ಸಾಲ ಮಾಡಿ, ಕೊನೆಗೆ ನಿರ್ಮಾಮವಾಗುವ ಆ ರೈತನಿಗೆ ಹಣದ ರೂಪದಲ್ಲಿ ಏನಾದರೂ ಸಹಾಯ ಮಾಡುತ್ತೀರಾ?

ಶ್ರೀ ಎಸ್. ಎಂ. ಕೃಷ್ಣ.— ಕೆಲವು ಸಂದರ್ಭಗಳಲ್ಲಿ ಮಾನ್ಯ ಹನುಮೇಗೌಡರ ಪ್ರಶ್ನೆಗೆ ಉತ್ತರ ಹೇಳುವುದು ಬಹಳ ಕಷ್ಟವಾಗುತ್ತದೆ. ಏನು ಮಾಡಬೇಕು ಎನ್ನುವ ಬಗ್ಗೆ ಸಧ್ಯದಲ್ಲೇ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ.

1-30 P.M.

ಶ್ರೀ ಕೋಣಂದೂರು ಲಿಂಗಪ್ಪ.—ರೈತರು ಸಾಲ ತೆಗೆದುಕೊಂಡು ಬಾವಿಗೆಳನ್ನು ತೆಗೆಸಿದಾಗ ಅಲ್ಲಿ ನೀರು ಬಾರದೇ ಇದ್ದರೆ ಅಂತಹವರಿಗೆ ಈ ಸಾಲದಲ್ಲಿ ರಿಯಾಯಿತಿ ಕೊಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ನಾವು ಎಲ್ಲಿ ಡ್ರಿಲ್ ಮಾಡಿರುತ್ತೇವೆ ಅಲ್ಲಿ ನೀರು ಬಾರದೆ ಹೋದರೆ ನಾವು ಡ್ರಿಲ್ಲಿಂಗ್ ಚಾರ್ಜ್‌ಸ್‌ನ್ನು ವೇವ್ ಮಾಡುತ್ತೇವೆ, ಅದರ ಪ್ರಶ್ನೆ ಬರುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ,—ನೀರು ಬಾರದೆ ಇರುವ ಬಾವಿಗಳು ತೋಡುತ್ತಾರೆ, ರೈತರು ಸಾಲ ತೆಗೆದುಕೊಂಡಿರುತ್ತಾರೆ, ನೀರು ಬಾರದೆ ಇರುವ ಬಾವಿಗಳಾದರೆ, ಅವರಿಗೆ ರಿಯಾಯಿತಿ ಕೊಟ್ಟು ಬೇರೆ ಕಡೆ ಬಾವಿ ತೆಗೆಸುವುದು ಸೂಕ್ತವಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಸಾಲ ಕೊಡುವ ಸಂಸ್ಥೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಅಥವಾ ಫೈನಾನ್ಸ್ ಇನ್‌ಸ್ಟಿಟ್ಯೂಷನ್ ಇರುತ್ತದೆ. ನಮ್ಮ ಕೆಲಸ ಸೀಮಿತವಾಗುತ್ತದೆ, ಆದ್ದರಿಂದ ಅವರು ಕೊಡುವ ಹಣವನ್ನು ನಾವು ವೇವ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.— ಸಾಲ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಕೊಡುತ್ತಾರೆ, ಬಾವಿ ಫೈಲ್ಯೂರ್ ಆದರೆ ಸರ್ಟಿಫಿಕೇಟ್ ಕೊಡುತ್ತಾರೆ, ಡೆವಲಪ್‌ಮೆಂಟ್ ಬ್ಯಾಂಕ್ ಒಂದಕ್ಕೊಂದು ಲಿಂಕ್ ಇಲ್ಲದೆ ಇರುವುದರಿಂದ ವರ್ಷಾನುಗಟ್ಟಲೇ ಬೇಕಾಗುತ್ತದೆ, ಆದುದರಿಂದ ಬ್ಯಾಂಕಿನವರು ಸೂಪರ್‌ವೈಸ್ ಮಾಡಿ ತಕ್ಷಣ ಸಬ್ಸಿಡಿ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಒಳ್ಳೆಯ ಅರ್ಥ ಇದೆ. ಇದನ್ನು ಮಾನ್ಯ ಸಹಕಾರ ಸಚಿವರ ಜೊತೆಯಲ್ಲಿ ಚರ್ಚೆಮಾಡಿ ಈ ಸಲಹೆಯನ್ನು ಕಾರ್ಯಗತಮಾಡುವುದು ಸಾಧ್ಯವೇ ಎನ್ನುವುದನ್ನು ಪರಿಶೀಲಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಬೆಂಗಳೂರಿನಲ್ಲಿ ಎಂಟು ಯೂನಿಟ್‌ಗಳ ಕ್ಯಾಂಪ್ ಇವೆ, ಯಾರಾದರು ಕಾಗದ ಬರೆದರೆ ಹೋಗುತ್ತಾರೆ, ಎರಡು ದಿವಸ ಇದ್ದು ಬರುತ್ತಾರೆ, ಶ್ರದ್ಧೆಯಿಂದ ಕೆಲಸ ನೋಡಿಕೊಳ್ಳುವುದಕ್ಕೆ ತಾಲ್ಲೂಕು ಮಟ್ಟದಲ್ಲಿ ಈ ಸೌಲಭ್ಯ ಇಲ್ಲವುದಿಲ್ಲ. ಈಗ ಎರಡು ಜಿಲ್ಲೆಗಳಿಗೆ ಒಂದು ಯೂನಿಟ್‌ನಂತೆ ಮಾಡಿ ಅಲ್ಲಿ ಖಾಯಂ ಇರಬೇಕು ಎಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಸಾಧ್ಯವಾದಮಟ್ಟಿಗೂ ಯೂನಿಟ್‌ಗಳನ್ನು ಚದುರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

## Panchayat Raj Finance Corporation

519. Sri JAYAPRAKASH SHETTY (Brahmavar).—

Will the Minister for Rural Development and Social Welfare be pleased to state :—

(*a*) whether there is any proposal for establishing a Panchayat Raj Finance Corporation in the State ;

(*b*) if so, when ?

Sri N. RACHAIAH (Minister for Rural Development and Social Welfare).—

(*a*) Yes.

(*b*) As early as possible.

ಶ್ರೀ ಜಯಪ್ರಕಾಶ್ ಶೆಟ್ಟಿ.— ಈಗ ರಾಜ್ಯದಲ್ಲಿ ಪಂಚಾಯತರಾಜ್ ಹಣಕಾಸು ಸಂಸ್ಥೆಯ ರೂಪರೇಷೆ ಏನು ?

† Sri N. RACHAIAH.—The main object of the Corporation is to help the Panchayat bodies by advancing loans to take up development projects; to help the Panchayat bodies by advancing loans in the blocks to develop orchards, pastures, rural industrialisation units and other small scale industries ; to assist panchayat bodies for the establishment of libraries, boys clubs, youth clubs ; to help the agriculturist to form associations ; to arrange for technical and other guidance to farmers as indicated above and to take up any other work that would add to the economic improvement of the panchayat bodies in the interests of the development of the rural people in the villages.

ಶ್ರೀ ಜಯಪ್ರಕಾಶ್ ಶೆಟ್ಟಿ — ಸ್ವಾಮಿ, ಈಗ ನಮ್ಮ ಪಂಚಾಯತಿಯಲ್ಲಿ ಹೆಚ್ಚಿನಮಟ್ಟಿಗೆ ಅಭಿವೃದ್ಧಿ ಕ್ರಮ ಹಣದ ಕೊರತೆಯಿಂದ ಆಗುತ್ತಾ ಇಲ್ಲ, ಆದಷ್ಟು ಬೇಗನೆ ಆಗುವ ಹಾಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಇದನ್ನು ಬಹಳ ಜಾಗ್ರತೆ ಮಾಡಬೇಕೆಂದು ಸರ್ಕಾರದ ಮನಸ್ಸಿನಲ್ಲಿ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈಗ ಹಣಕಾಸು ಸಂಸ್ಥೆಯನ್ನು ರಾಜ್ಯಮಟ್ಟದಲ್ಲಿ ಒಂದೊಂದು ಇಡುತ್ತೀರಾ, ಅಥವಾ ಎರಡಾ ಜಿಲ್ಲಾ ಕೇಂದ್ರಗಳಲ್ಲಿ, ಅಂಗಸಂಸ್ಥೆಗಳನ್ನು ಸ್ಥಾಪನೆ ಮಾಡಿ, ಆಯಾಯ ಜಿಲ್ಲೆಯ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ, ಪಂಚಾಯತಿಗಳಲ್ಲಿ ನೇರವಾದ ಸಂಪರ್ಕ ಇರುವ ಹಾಗೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.— ಈಗ ಮೊದಲು ರಾಜ್ಯಮಟ್ಟದಲ್ಲಿ ಇರುತ್ತವೆ, ಆಮೇಲೆ ಸ್ಥಳೀಯ ಸಂಸ್ಥೆಗಳಿಂದ ಏನೇನು ಮನವಿಗಳು, ಬರುತ್ತವೆ ಅದನ್ನು ಯೋಚನೆಮಾಡಿ ಅಗತ್ಯ ಇದ್ದರೆ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.